## ಬೆಳೆಯುವ ಸಿರಿ ಮೊಳಕೆಯಲ್ಲಿ

ಕಲರ್ಸ್ ಕನ್ನಡದಲ್ಲಿ 'ಗೀತಾ' ಎಂಬ ಹೊಸ ಧಾರಾವಾಹಿ ಆರಂಭವಾಗಿದೆ. ಅದರಲ್ಲಿ ಒಂದು ಪಾತ್ರ ಹೀಗಿತ್ತು ಹಣದ ಮದವೇರಿದ ಹುಡುಗನೊಬ್ಬ ಕಾರಿನಲ್ಲಿ ಕಾಲೇಜ್‌ಗೆ ಬರುತ್ತಾನೆ. ತಾನು ಕಾರು ನಿಲ್ಲಿಸುತ್ತಿದ್ದ ಜಾಗದಲ್ಲಿ ಅದೇ ಕಾಲೇಜಿನ ಉಪನ್ಯಾಸಕ ಕಾರು ನಿಲ್ಲಿಸಿರುವುದನ್ನು ನೋಡಿ ಆ ಹುಡುಗನಿಗೆ ಮೈ ಉರಿದು ಹೋಗುತ್ತೆ! ಕೂಡಲೇ ಅಬ್ಬರಿಸುತ್ತ ಸದರಿ ಉಪನ್ಯಾಸಕರನ್ನು ಬೈಯ್ಯುತ್ತಲೇ ಅವರ ಕಾರಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚುತ್ತಾನೆ.

ಉಪನ್ಯಾಸಕ ಮಂಡಿಯೂರಿ ಕೈ ಮುಗಿಯುತ್ತಾ ಬೇಡಿಕೊಂಡರೂ ಆ ಪುಂಡ ಕ್ಯಾರೇ ಅನ್ನುವುದಿಲ್ಲ. ಅಲ್ಲಿ ಇದ್ದ ನೂರಾರು ವಿದ್ಯಾರ್ಥಿಗಳು ಮತ್ತು ಕಾಲೇಜಿನ ಸಿಬ್ಬಂದಿ ಮೂಕ ಪ್ರೇಕ್ಷಕರಾಗುತ್ತಾರೆ. ದೀರ್ಘ ವರ್ಷಗಳ 'ಅಗ್ನಿ ಸಾಕ್ಷಿ' ಮುಗಿಯಿತು ಎಂದು ನಿರಾಳ ವಾಗಿದ್ದ ವೀಕ್ಷಕರಿಗೆ 'ಗೀತಾ' ಮತ್ತೊಂದು ಅಗ್ನಿ ಪರೀಕ್ಷೆಗೆ ನಾಂದಿ ಆದೀತೇ?

—ಆರ್. ವೀರೇಶ್ ಕುಮಾರ್ ಬೆಂಗಳೂರು

ವಾರದ ಪತ್ರ

## ಚಂದನ ಎಂಬ ಹೆಸರು ಸಾರ್ಥಕ

ಸರ್ಕಾರದಿಂದ ಪ್ರಾಯೋಜಿತವಾದದ್ದು ಯಾವುದೇ ಆಗಿರಲಿ ಅದು ಕಳಪೆ, ನಿಕೃಷ್ಟ ಎಂಬ ಭಾವನೆ ಜನರಲ್ಲಿ ಬೇರೂರಿದೆ. ಅದು ಸರ್ಕಾರಿ ಶಾಲೆ ಇರಬಹುದು. ಸರ್ಕಾರಿ ಆಸ್ಪತ್ರೆಯಾಗಿರಬಹುದು. ಸರ್ಕಾರಿ ಬಸ್ಸು ಆಗಿರಬಹುದು. ಆದರೆ ಸರ್ಕಾರದಿಂದ ಪ್ರಾಯೋಜಿತವಾದ ಚಂದನ ವಾಹಿನಿಯ ವಿಷಯದಲ್ಲಿ ಈ ಭಾವನೆ ಹುಸಿಯಾಗಿದೆ. ಚಂದನ ವಾಹಿನಿಯಲ್ಲಿ ಪ್ರಸಾರವಾಗುವ ಶುಭೋದಯ, ಥಟ್ ಅಂತ ಹೇಳಿ, ಗಾನಚಂದನ ಮುಂತಾದ ಕಾರ್ಯಕ್ರಮಗಳ ಬಗ್ಗೆ ವೀಕ್ಷಕರಿಗೆ ಒಳ್ಳೆಯ ಅಭಿಪ್ರಾಯವಿದೆ.

ಥಟ್ಟಂತ ಹೇಳಿ ಕಾರ್ಯಕ್ರಮವಂತೂ ಸಾವಿರಗಳ ಗಡಿಯನ್ನು ದಾಟಿ ಗಿನ್ನೆಸ್ ದಾಖಲೆಯನ್ನು ಸ್ಥಾಪಿಸಿದೆ. ಕನ್ನಡ ನಾಡಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಹೆಸರು ಮಾಡಿದ ಗಣ್ಯರನ್ನು ಪರಿಚಯಿಸುವ 'ಶುಭೋದಯ' ಚಂದನ ವಾಹಿನಿಗೆ ಕಿರೀಟಪ್ರಾಯವಾಗಿದೆ. 'ಗಾನಚಂದನ' ಕಾರ್ಯಕ್ರಮವಂತೂ ತೆರೆಮರೆಗೆ ಸರಿದಿರುವ 'ಮಧುರ ಮಧುರ ವೀ ಮಂಜುಳಗಾನ'ದ ಸ್ಥಾನವನ್ನು ತುಂಬಿದೆ. ಕರ್ನಾಟಕದ ಎಲ್ಲ ಜಿಲ್ಲೆಗಳನ್ನು ಪರಿಚಯಿಸುತ್ತಿರುವ ಗಾನ ಚಂದನ ಇಂಪಾದ ಸಂಗೀತದೊಂದಿಗೆ ಆಯಾ ಸ್ಥಳಗಳ ವೈಶಿಷ್ಟ್ಯಗಳನ್ನು ವೀಕ್ಷಕರಿಗೆ ಪರಿಚಯಿಸುತ್ತದೆ.

ಇಂತಹ ಉತ್ತಮ ಕಾರ್ಯಕ್ರಮಗಳನ್ನು ನೀಡುತ್ತಿರುವ ಈ ವಾಹಿನಿ 'ಚಂದನ' ಎಂಬ ಹೆಸರನ್ನಿಟ್ಟಿರುವುದು ಸಾರ್ಥಕವಾಗಿದೆ. ಚಂದನದ ಸೌರಭ ಹೀಗೆಯೇ ಪಸರಿಸುತ್ತಿರಲಿ ಎಂದು ಹಾರೈಸುವೆ.

—ಮುರಳೀಧರ ಕುಲಕರ್ಣಿ, ಬೀದರ್

## ಇದೊಂತರ 'ಅಪ್ಪಿಕೋ' ಚಳವಳಿ

ಕಲರ್ಸ್‌ನಲ್ಲೇ ಈ ಹಿಂದಿನ ಬಿಗ್‌ಬಾಸ್ ಸರಣಿಗೆ ಹೋಲಿಸಿದರೆ ಪ್ರಸ್ತುತ ಶೋಗೂ ಅದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಇಲ್ಲಿ ಹೆಣ್ಣು ಸ್ಪರ್ಧಾಳು ಅಳಲು ಆರಂಭಿಸಿದರೆ ಅವರನ್ನು ಅಪ್ಪಿಕೊಂಡು ಸಮಾಧಾನಿಸುವವರು ಗಂಡು ಸ್ಪರ್ಧಾಳುಗಳು; ಇನ್ನು ಗಂಡು ಸ್ಪರ್ಧಾಳು ಅಳಲು ಆರಂಭಿಸಿದರೆ ಅವರನ್ನು ಅಪ್ಪಿಕೊಂಡು ಸಮಾಧಾನಿಸುವವರು ಹೆಣ್ಣು ಸ್ಪರ್ಧಾಳುಗಳು; ಖುಷಿಯಾದಾಗಲೂ ಹೀಗೆಯೇ ದುಬ್ಬ ಚಪ್ಪರಿಸಿ ಅಪ್ಪಿ ಕುಣಿದಾಡುವುದು ಸಾಗುತ್ತದೆ. ಆಗಾಗ ಪರಸ್ಪರ ಮುತ್ತಿಕ್ಕಲು ಹಾತೊರೆಯುವುದು. ಕೆಲವೊಮ್ಮೆ ಹಾಸ್ಯಾಸ್ಪದವೆನ್ನಿಸುವ ಚಟುವಟಿಕೆಗಳು. ಕಿಶನ್ ಇದಕ್ಕಾಗೇ ಈ ಕಾರ್ಯಕ್ರಮಕ್ಕೆ ಬಂದಂತೆನಿಸುತ್ತದೆ. ಕುಟುಂಬ ಸಮೇತ ಮಕ್ಕಳು ನೋಡಲು ಮುಜುಗರವೆನಿಸುತ್ತದೆ. ಇನ್ನು ಶೈನಿ ತಾಯಿಯಂತೂ ಈಗಾಗಲೇ ಸೊಸೆ ದೀಪಿಕಾ ದಾಸ್ ಎಂದು ಆಯ್ಕೆ ಮಾಡಿಕೊಂಡು ಬಿಟ್ಟಿದ್ದಾರೆ. ಸಂದರ್ಶನವೊಂದರಲ್ಲಿ ನನ್ನ ಮಗನಿಗೆ ಚೈತ್ರಾ ಬೇಡ. ದೀಪಿಕಾ ಆದರೆ ಒಪ್ಪಿಗೆ ಎಂದಿದ್ದಾಳೆ. ಯಾವ ಸಂದೇಶವನ್ನು ನೀವು ಈ ಮೂಲಕ ಹೇಳುತ್ತಿದ್ದೀರಿ?

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು

## ಕನ್ನಡ ಡಿಂಡಿಮವ

ಝೀ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ಅಂತಿಮ ಸುತ್ತು ಚಿತ್ರದುರ್ಗದಲ್ಲಿ ಅತ್ಯಂತ ವೈಭವದಿಂದ ಮುಕ್ತಾಯಗೊಂಡಿದೆ. ಚಿಣ್ಣರಾದ ಅನೂಪ್ ಮತ್ತು ಡಿಂಪನ ಜೋಡಿಯು ಪ್ರಥಮ ಸ್ಥಾನಕ್ಕೆ ಬಾಜನರಾಗಿದ್ದು ಸಂತೋಷವೇ ಸರಿ. ರಾಷ್ಟ್ರಕವಿ ಕುವೆಂಪು ಅವರ 'ಭಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವ' ಹಾಡನ್ನು ಕೊರಿಯೊ ಗ್ರಾಫರ್ ರುದ್ರಮಾಸ್ತರ್ ಅವರು ತಮ್ಮದೇ ಆದ ವಿನೂತನ ಶೈಲಿಯಲ್ಲಿ ಕರ್ನಾಟಕದ ಗ್ರಾಮೀಣ ಜನಪದ ಕಲೆಯನ್ನು ವೇದಿಕೆಯ ಮೇಲೆ ತಂದು ವೀಕ್ಷಕರು ಆಸ್ವಾದಿಸುವಂತೆ ಮಾಡಿದ್ದಾರೆ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಮದುವೆ ಎಂಬ ಕಾರ್ಖಾನೆ

ಕಲರ್ಸ್ ಕನ್ನಡದ 'ಬಿಗ್‌ಬಾಸ್' ಮನರಂಜನೆ ನೀಡುವುದರ ಜೊತೆಗೆ ವರ್ಷಕ್ಕೊಂದು ಜೋಡಿಯನ್ನು ತಯಾರು ಮಾಡಿ ಕಳಿಸುತ್ತಿದೆ. ಕಳೆದ ಸೀಜನ್‌ಗಳಲ್ಲಿ ಜೆಕೆ–ಶ್ರುತಿ ಪ್ರಕಾಶ್ ಜೋಡಿ ಏನಾಯಿತೋ ಗೊತ್ತಿಲ್ಲ. ಚಂದನ್ ಶೆಟ್ಟಿ– ನಿವೇದಿತಾ ಗೌಡ ಮದುವೆ ಆಗುತ್ತಿದ್ದಾರೆ. ಈ ಬಾರಿಯ ಸ್ಪರ್ಧಿಗಳಲ್ಲಿ ಶೈನ್– ದೀಪಿಕಾ ಅವರ ಹೆಸರನ್ನು ವಾರಾಂತ್ಯದಲ್ಲಿ ಕಿಚ್ಚ ಸ್ಮರಿಸದೆ ಇರುವುದಿಲ್ಲ. ಅಂದ ಮೇಲೆ ಈ ವರ್ಷದ ಜೋಡಿ ಅವರಿಬ್ಬರೇ ಆಗಿರಬಹುದೇ?

—ಎನ್.ಎಸ್. ಚಂದ್ರಶೇಖರ್ ಬೆಂಗಳೂರು

## ಕಥೆ ಚಿಕ್ಕದಾಗಲಿ

ಕಲರ್ಸ್ ಸೂಪರ್‌ನ 'ಮಗಳು ಜಾನಕಿ'ಯಲ್ಲಿ ಸಿಪ್ಪಿಯ ಮಕ್ಕಳಾದ ಜಾನಕಿ ಮತ್ತು ಮಧು ಇಬ್ಬರೂ ನೆಮ್ಮದಿ ಇಲ್ಲದೆ ಕಷ್ಟದಲ್ಲಿ ಮುಳುಗಿದ್ದಾರೆ. ತಾಯಿ ರಶ್ಮಿ ಮಕ್ಕಳ ಮನಸ್ಸಿನಲ್ಲಿ ಏನಿದೆಯೆಂದು ತಿಳಿಯಲಾಗದೆ ತನಗೆ ಅರಿವಿಲ್ಲದಂತೆ ಮಕ್ಕಳನ್ನು ಒಂದಲ್ಲ ಒಂದು ಕಷ್ಟಕ್ಕೆ ದೂಡುತ್ತಿರುತ್ತಾಳೆ. ಟಿ.ಎನ್. ಸೀತಾರಾಂ ಅವರು ಕಥೆಯನ್ನು ರಬ್ಬರಿನಂತೆ ಎಳೆ ಎಳೆದು ಹಿಗ್ಗಿಸುವ ಬದಲು ಚಿಕ್ಕದಾಗಿ ಚೊಕ್ಕವಾಗಿಸಬಹುದಲ್ಲವೇ?

—ಎಸ್. ವಿಜಯಕುಮಾರಿ, ಬೆಂಗಳೂರು

ಅದ್ಭುತ ನಟನೆ: ಇತ್ತೀಚೆಗೆ 'ಮಗಳು ಜಾನಕಿ' ಧಾರಾವಾಹಿ ನೀರಸವಾಗಿ ಸಾಗುತ್ತಿದ್ದರೂ, ಕೆಲವು ನಟ, ನಟಿಯರ ಅಭಿನಯ ನೋಡುವುದಕ್ಕಾದರೂ ಇದನ್ನು ನೋಡುವಂತಾಗಿದೆ. 1–1–20ರ ಕಂತಿನಲ್ಲಿ 'ಆನಂದ ಬೆಳಗೂರ್' ಅವರ ಅಭಿನಯ ಅದ್ಭುತವಾಗಿತ್ತು. ಭಾರ್ಗಿ ಪಾತ್ರ, ದೇವಕಿ, ಜಾನಕಿ, ಸಿ.ಎಸ್.ಪಿ. ಎಲ್ಲಾ ಪಾತ್ರಧಾರಿಗಳೂ ಭಾವಾಭಿನಯದಿಂದ ನಮ್ಮನ್ನು ಸೆಳೆಯುತ್ತಿದ್ದಾರೆ.

—ಸುಲೋಚನಾ ವಾದಿರಾಜ್, ಹೊಳೆಹೊನ್ನೂರು

## ಪಾತ್ರಧಾರಿ ಬದಲಾಗಬಾರದು

ಸ್ಟಾರ್ ಸುವರ್ಣದ 'ಇಂತಿ ನಿಮ್ಮ ಆಶಾ'ದ ಸಾಂಸಾರಿಕ ಕಥೆ ಇಷ್ಟವಾಗುತ್ತದೆ. ಪ್ರತಿದಿನ ಸೊಗಸಾಗಿ ಕಥೆ ಸಾಗುತ್ತಿದೆ. ಆದರೂ ಇಂಗ್ಲಿಷ್ ಬಾರದ ತಾಯಿಯನ್ನು ಅಷ್ಟರ ಮಟ್ಟಿಗೆ ತಿರಸ್ಕಾರದಿಂದ ಕಾಣುವ ಗಂಡ ಮತ್ತು ಮಕ್ಕಳು ಇರುತ್ತಾರೆಯೇ ಎಂಬುದು ಪ್ರಶ್ನೆ. ಮೋನಿಕಾ ಪಾತ್ರಧಾರಿ ಬದಲಾಗಿದ್ದಾರೆ. ಮೊದಲು ನಟಿಸುತ್ತಿದ್ದ ನಟಿ ಆ ಪಾತ್ರಕ್ಕೆ ಚೆನ್ನಾಗಿ ಒಪ್ಪುತ್ತಿದ್ದರು. ಈಗಿರುವ ನಟಿ ನೋಡಲು ಸುಂದರ ಬೊಂಬೆ. ಆದರೆ ಆ ಪಾತ್ರದ ಜೀವಾಳ ಅರಿತಿಲ್ಲ.

—ಎಸ್. ಚಂದ್ರಕಾಂತ